OS 318/2022
ಪಿಡಬ್ಲೂ-1

ದಿಃ 06-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ. ಸಿ ಬಿ ಎಂ ವಕೀಲರಿಂದಃ**

ಸಾಕ್ಷಿಗೆ ಮರಾಠಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀಮತಿ ಡಿ ಯು ಡಿ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋದಿಸಲಾಯಿತು.

ನಾನು ದ್ವಿತೀಯ ಪಿ ಯು ಸಿ ವರೆಗೂ ಓದಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲೆಯ ಬಗ್ಗೆ ಮಾಹಿತಿ ಇದೆ. ನಾನು ಮತ್ತು ಪ್ರತಿವಾದಿಗಳು ಸದಲಗಾ ದಲ್ಲಿ ಒಟ್ಟಿಗೆ ವಾಸವಾಗಿಲ್ಲ ಎಂದರೆ ಸರಿ. ನಾನು ಮಿರಜ ನಲ್ಲಿ ವಾಸವಾಗಿದ್ದೇನೆಂದರೆ ಸರಿ. 1 ನೇ ಪ್ರತಿವಾದಿಯೂ ಕಡೋಳಿ ಕೊಲ್ಲಾಪೂರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ಲಂಡನಲ್ಲಿ ವಾಸವಾಗಿದ್ದಾರೆ ಎಂದದಿರೆ ಸರಿ. 2 ನೇ ಪ್ರತಿವಾದಿ ದುಬೈ ನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂಬರ 5 ಮತ್ತು 6 ಕೊಲ್ಲಾಪೂರದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 8 ಪ್ರತಿವಾದಿ ಮಾತ್ರ ಸದಲಗಾದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿಗಳು ಏಕತ್ರ ಒಂದೇ ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸರಿ. ನಮ್ಮುಗಳ ಮಧ್ಯೆ ಏಕತ್ರ ಕುಟುಂಬ ಇಲ್ಲ ಎಂದರೆ ಸರಿ. ನಾವು ಪ್ರತ್ಯೇಕವಾಗಿ 50 ವರ್ಷಗಳಿಂದ ವಾಸವಾಗಿದ್ದೇವೆ ಎಂದರೆ ಸರಿ.

ದಾವಾ ಆಸ್ತಿಗಳು ನನ್ನ ಮತ್ತು ಪ್ರತಿವಾದಿಗಳ ಏಕತ್ರ ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿ. ನಾವು ಮತ್ತು ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಬೇರೆ ಬೇರೆ ಉಳುಮೆ ಮಾಡುತ್ತಿದ್ದೇವೆ ಎಂದರೆ ಸರಿ. ಪ್ರಭಾಕರ , ಬಾಸ್ಕರ ಮತ್ತು ದಿನಕರ ಮತ್ತು ನಾನು ಸ್ವಂತ ಅಣ್ಣ ತಮ್ಮಂದಿರು ಎಂದರೆ ಸರಿ. ಪ್ರತಿವಾದಿ ನಂಬರ 8 ಸುಮಾರು 70 ವರ್ಷಗಳಿಂದ ತನ್ನ ಹಿಸ್ಸೆಯ ಜಮೀನನ್ನು ತಾನು ಉಳುಮೆ ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯೂ ಅವರವರ ಜಮೀನನ್ನು ಅವರವರು ಉಳುಮೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿ ನಂಬರ 2 ಮತ್ತು 3 1 ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. ಪ್ರತಿವಾದಿ ನಂಬರ 1 ತನ್ನ ¼ ಅಂಶ ಭಾಗವನ್ನು ತನ್ನ ಮಕ್ಕಳಿಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿ. ಅದೆಸೀ ರೀತಿ ಎಂ ಆರ ಎಚ್ 59/2014-15 ರ ಪ್ರಕಾರ ಪ್ರವಾದಿ ನಂಬರ 1 ತನ್ನ ಹಕ್ಕನ್ನು ತನ್ನ ಮಕ್ಕಳಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಅದನ್ನು ನಾವು ಪ್ರಶ್ನಿಸಿಲ್ಲ. ಎಂದರೆ ಸರಿ. ನಾನು ಕಬ್ಬು ಬೆಳೆದು ಅದನ್ನು ಜಂಟಿಯಾಗಿ ಸಾಗಾಣಿಕೆ ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ನನ್ನ ಸಹೋದರರ ಖಾತೆಗಳು ಬೇರೆ ಬೇರೆ ಆಗಿವೆ ಎಂದರೆ ಸರಿ. ನನ್ನ ಖಾತೆ ನಂಬ 1478 ಎಂದರೆ ಸರಿ. 1 ನೇ ಪ್ರತಿವಾದಿಯ

ಖಾತೇ ನಂಬರ 1479 ಎಂದರೆ ಸರಿ. ಪ್ರತಿವಾದಿ ನಂಬರ 4 ರಿಂದ 7 ರವರ ಖಾತೆ ನಂಬರ 1477 ಎಂದರೆ ಸರಿ. ಪ್ರತಿವಾದಿ ನಂಬರ 8 ರವರ ಖಾತೆ ನಂಬರ 1476 ಎಂದರೆ ಸರಿ. ಸದರಿ ಖಾತೆಗಳು ಪ್ರತ್ಯೇಕವಾಗಿ ತಲಾ ¼ ಅಂಶಕ್ಕೆ ದಾಖಲು ಆಗಿವೆ ಎಂದರೆ ಸರಿ. ದಿನಾಂಕ 11/11/1991 ರ ಪಾಲು ವಿಭಾಗದ ಕರಾರು ಪತ್ರವನ್ನು ನಾನೇ ಹಾಜರು ಪಡಿಸಿದ್ದೇನೆಂದರೆ ಸರಿ. ಅದು ನಮ್ಮಲ್ಲಿ ಆದ ವಾಟ್ನಿ ಪತ್ರ ಎಂದರೆ ಸರಿ. ಸದರಿ ವಾಟ್ನಿ ಕರಾರು ಪತ್ರದಲ್ಲಿ ನಮ್ಮ 4 ಜನ ಸಹೋದರರ ಸಹಿ ಇದೆ ಎಂದರೆ ಸರಿ. ಸದರಿ ಕರಾರು ಪತ್ರದಂತೆ ನಮ್ಮ 4 ಜನ ಸಹೋದರರ ಹೆಸರು ಪ್ರತ್ಯೇಕ ವೀಸ್ತೀರ್ಣಕ್ಕೆ ನಮೂದು ಆಗಿದೆ ಎಂದರೆ ಸರಿ. ನಮ್ಮುಗಳು ಮಧ್ಯೆ ಸಂಬಂಧದಲ್ಲಿ ಮತ್ತು ಆಸ್ತಿಯಲ್ಲಿ ಏಕತ್ರ ಕುಟುಂಬ ಇಲ್ಲ ಎಂದರೆ ಸರಿ. ನಾವು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಮತ್ತು ಉಳುಮೆ ಮಾಡುತ್ತಿದ್ದೇವೆ ಎಂದರೆ ಸರಿ. 8 ನೇ ಪ್ರತಿವಾದಿ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ

(ಸಾಕ್ಷಿಗೆ ಕನ್ನಡದಲ್ಲಿ ಕೇಳಿದ ಪ್ರಶ್ನೇಗಳನ್ನು ಮರಾಠಿ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಮಾರಾಠಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ